KATK010037232019

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.**

**Spl.C. 270/2019**

**ಫಿರ್ಯಾದುದಾರಃ** ರಾಜ್ಯ ಸರ್ಕಾರದ ಪರವಾಗಿ
ಹಂದನಕೆರೆ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿರುಃ** ಪ್ರದೀಪ್ @ ದೀಪು, ಬಿನ್ ಚಂದ್ರಯ್ಯ,
54 ವರ್ಷ, ಚಿಕ್ಕಬಿದರೆ , ಹುಳಿಯಾರು ಹೋಬಳಿ,
ಚಿಕ್ಕನಾಯಕನಹಳ್ಳಿ ತಾಲ್ಲೂಕು,
ತುಮಕೂರು ಜಿಲ್ಲೆ.

**ದೋಷಾರೋಪಣೆ**

ಎ.ನಾಗಿರೆಡ್ಡಿ, 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ.

ದಿನಾಂಕ 02.06.2019 ರಂದು ರಾತ್ರಿ 8 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ತಾರೀಕಟ್ಟೆ ತಾಂಡ್ಯ ಗ್ರಾಮದ ಚಾಸಾ.2 ಅರುಣ್ ಕುಮಾರ @ ಅರುಣ್ ಕುಮಾರ್ ನಾಯ್ಕ ರವರ ಮನೆಯ ಹತ್ತಿರ ಹೋಗಿ ಚಾಸಾ.1 ರಾಜಾನಾಯ್ಕ ರವರಿಗೆ ನಮ್ಮ ಕಾರಿಗೆ ಅಪಘಾತಮಾಡಿ ಟ್ರಾಕ್ಟರ್ ನಿಲ್ಲಿಸದೇ ಬಂದಿದ್ದೀಯಾ, ಸೂಳೇಮಗನೇ, ಬಂಜಾರಿ ಬೋಳೀ ಮಗನೇ, ನಿನ್ನ ಜಾತಿನಕ್ಕಾಯ, ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕವಾಗಿ ಲಂಬಾಣಿ ನನ್ನ ಮಗನೇ ಎಂದು ಜಾತಿ ನಿಂದನೆ

ಮಾಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.ಕಲಂ.504 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ ಕಲಂ 3(1)(r)(s) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ಅಡಿಕೆ ದಬ್ಬೆ ಮತ್ತು ದೊಣ್ಣೆಯಿಂದ ಚಾಸಾ.1 ರವರ ಎಡತೊಂಟ, ಎಡಕಾಲಿನ ತೊಡೆ, ಎಡಕಾಲಿನ ಮಂಡಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನು ಉಂಟುಮಾಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.ಕಲಂ.323, 324 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರ ಮೇಲೆ ಹಲ್ಲೆ ನಡೆಸಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ದಂ.ಸಂ.ಕಲಂ.506 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿತರಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ **7 ನೇ ಡಿಸೆಂಬರ್ 2024.**

( **ಎ.ನಾಗಿರೆಡ್ಡಿ** )
3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.